ನಿವೇದನೆ

# ನೀರಿಳಿದ ಮೇಲೆ ಸವಾಲುಗಳ ಪ್ರವಾಹ

ಕರ್ನಾಟಕದ ಬಹುಭಾಗ ಬರದ ದವಡೆಯಿಂದ ಪ್ರವಾಹದ ಸಂಕಷ್ಟಕ್ಕೆ ಒಮ್ಮೆಗೇ ಮಗ್ಗುಲು ಬದಲಿಸಿದೆ. ಲಕ್ಷಾಂತರ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಹಾನಿಯ ಜೊತೆಗೆ ಅಪಾರ ಪ್ರಮಾಣದ ಆಸ್ತಿಪಾಸ್ತಿ ನಷ್ಟ ಸಂಭವಿಸಿದೆ. ನಷ್ಟದ ಒಟ್ಟು ಪ್ರಮಾಣದ ಅಂದಾಜು ತಕ್ಷಣ ಲೆಕ್ಕಕ್ಕೆ ಸಿಗುವಂತಹದ್ದಲ್ಲ. ಸಮಾಧಾನದ ಸಂಗತಿಯೆಂದರೆ, ಪ್ರವಾಹದ ಜೊತೆಗೆ ಮಾನವೀಯತೆ ಕೂಡ ಉಕ್ಕುವುದು. ಕಷ್ಟಕ್ಕೆ ಸಿಲುಕಿದವರ ನೆರವಿಗೆ ಓಗೊಡುವವರು ನಮ್ಮ ನಡುವೆಯೇ ದೊಡ್ಡ ಪ್ರಮಾಣದಲ್ಲಿಯೇ ಇರುವುದು, ಮೇಲ್ನೋಟಕ್ಕೆ ಬರಡಾಗಿ ಕಾಣುವ ಸಮಾಜದ ಅಂತಃಕರಣದಲ್ಲಿ ಮಾನವೀಯತೆಯ ಸೆಲೆಯಿನ್ನೂ ಉಳಿದುಕೊಂಡಿದೆ ಎನ್ನುವುದಕ್ಕೆ ನಿದರ್ಶನದಂತಿದೆ.

ಪ್ರಕೃತಿ ವಿಕೋಪಗಳು ಸಮಾಜದ ಒಳಿತಿನ ಜೊತೆಗೆ ಕುರೂಪವನ್ನೂ ಬಯಲುಮಾಡುತ್ತವೆ. ಅಂಥ ಕುರೂಪಕ್ಕೆ ಉದಾಹರಣೆ ಸರ್ಕಾರ ಹಾಗೂ ರಾಜಕಾರಣಿಗಳು. ಉತ್ತರ ಕರ್ನಾಟಕ ಮತ್ತು ಕರಾವಳಿ ಭಾಗದಲ್ಲಿ ಕಾಣಿಸಿಕೊಂಡ ಪ್ರವಾಹಕ್ಕೆ ನಮ್ಮ ರಾಜಕೀಯ ಪಕ್ಷಗಳು ಸ್ಪಂದಿಸಿದ ರೀತಿ ನಾವು ಆರಿಸಿದ ಪ್ರಜಾಪ್ರತಿನಿಧಿಗಳು ಎಂತಹವರು ಎನ್ನುವುದನ್ನು ನಮಗೆ ಮನದಟ್ಟು ಮಾಡಿಸುವಂತಿದೆ. ಅರಿಶಿಣದ ಪಸೆಯಿನ್ನೂ ಆರದ ವರನಂತಿರುವ ಮುಖ್ಯಮಂತ್ರಿ ಯಡಿಯೂರಪ್ಪನವರು, ಹೈಕಮಾಂಡ್ ತಾಕೀತು ಮಾಡಿದ ನಂತರವಷ್ಟೇ ಪ್ರವಾಹ ಸ್ಥಳಗಳ ವೀಕ್ಷಣೆಗೆ ಮುಂದಾದರು. ಸರ್ಕಾರ ರಚಿಸಲಿಕ್ಕೆ ಅವರು ತೋರಿದ ಆತುರ ಜನರ ತೊಂದರೆಗೆ ಸ್ಪಂದಿಸುವಲ್ಲಿ ವ್ಯಕ್ತವಾಗಲಿಲ್ಲ ಎನ್ನುವುದು ಅಧಿಕಾರಕೇಂದ್ರದ ಆದ್ಯತೆಯೇನು ಎನ್ನುವುದನ್ನು ಸೂಚಿಸುವಂತಿದೆ. ಆಡಳಿತಾರೂಢ ಪಕ್ಷವಷ್ಟೇ ಅಲ್ಲ, ವಿರೋಧಪಕ್ಷಗಳು ಕೂಡ ತೊಂದರೆಗೆ ಸಿಲುಕಿದ ಜನರ ಬಳಿಗೆ ಹೋಗುವ ತೊಂದರೆ ತೆಗೆದುಕೊಳ್ಳಲಿಲ್ಲ. ಬಹುತೇಕ ರಾಜಕೀಯ ನಾಯಕರ ಕಾಳಜಿ ಸಾಮಾಜಿಕ ಜಾಲತಾಣಗಳಿಗೆ ಸೀಮಿತವಾಯಿತು.

ಉತ್ತರ ಕರ್ನಾಟಕ ಭಾಗದಲ್ಲಿನ ಪ್ರವಾಹ ತೀರಾ ಅನಿರೀಕ್ಷಿತವಾದುದೇನೂ ಅಲ್ಲ. ಮಹಾರಾಷ್ಟ್ರ ಸರ್ಕಾರ ತನ್ನ ಜಲಾಶಯಗಳಿಂದ ದೊಡ್ಡ ಪ್ರಮಾಣದ ನೀರನ್ನು ಹೊರಬಿಟ್ಟಾಗಲೆಲ್ಲ ಉಂಟಾಗುವ ಕೃತಕ ಪ್ರವಾಹವನ್ನು ಕರ್ನಾಟಕ ಎದುರಿಸಲೇಬೇಕಾಗಿದೆ. ಮಹಾರಾಷ್ಟ್ರದಲ್ಲಿ ಮಳೆ ಹೆಚ್ಚಾಗಿ ಕೃಷ್ಣಾ ನದಿಯಲ್ಲಿ ಪೂರ ಕಾಣಿಸಿಕೊಂಡರೆ, ಅದರ ಪರಿಣಾಮ ಕರ್ನಾಟಕದ ಮೇಲೆಯೇ ಆಗುತ್ತದೆನ್ನುವುದು ಸಾಮಾನ್ಯ ಜ್ಞಾನ. ಆದರೆ, ಅಂಥ ಸಂದರ್ಭ ಎದುರಾದರೆ ಅದನ್ನು ಎದುರಿಸುವುದು ಹೇಗೆ ಎನ್ನುವ ಬಗ್ಗೆ ನಮ್ಮ ರಾಜಕಾರಣಿಗಳು–ಅಧಿಕಾರಿಗಳು ತಾಲೀಮು ನಡೆಸುವುದಿಲ್ಲ. ಪ್ರವಾಹ ಸ್ಥಿತಿ ಸೃಷ್ಟಿಯಾದಾಗ ಅದನ್ನು ಎದುರಿಸಲಿಕ್ಕೆ ನಮ್ಮ ಬಳಿ ಸರಿಯಾದ ಕಾರ್ಯತಂತ್ರವೇ ಇಲ್ಲ. ಮಹಾರಾಷ್ಟ್ರದ ಸಾಂಗ್ಲಿಯ ಸುತ್ತಮುತ್ತಲ ಪ್ರದೇಶಗಳೂ ಪ್ರವಾಹಕ್ಕೆ ತುತ್ತಾಗುತ್ತವೆ. ಆ ಪರಿಸ್ಥಿತಿಯನ್ನು ಎದುರಿಸಲು ಅಲ್ಲಿನ ಸರ್ಕಾರ ಸಾಕಷ್ಟು ಪೂರ್ವಸಿದ್ಧತೆ ನಡೆಸುತ್ತದೆ. ಸಾಧ್ಯವಿರುವ ಕಡೆಗಳಲ್ಲೆಲ್ಲ ಹಳ್ಳಿಗಳಿಗೆ ತಡೆಗೋಡೆಗಳನ್ನು ನಿರ್ಮಿಸುವುದು, ರಸ್ತೆಗಳನ್ನು ಎತ್ತರಿಸುವಂತಹ ಚಟುವಟಿಕೆಗಳು ಮಳೆಗಾಲಕ್ಕೆ ಮುನ್ನ ನಡೆಯುತ್ತವೆ. ಎಲ್ಲ ಸಾಧ್ಯತೆಗಳನ್ನು ಮೀರಿ ಗ್ರಾಮಗಳು ಜಲಾವೃತವಾದರೆ, ವಿಶೇಷ ಬೋಟಿಂಗ್ ವ್ಯವಸ್ಥೆಯ ಬಗ್ಗೆಯೂ ಸಿದ್ಧತೆ ನಡೆದಿರುತ್ತದೆ. ಇಂಥ ಯಾವ ಚಟುವಟಿಕೆಗಳೂ ಕರ್ನಾಟಕದಲ್ಲಿ ನಡೆಯುವುದಿಲ್ಲ.

ಪಿಕ್ನಿಕ್‌ಗೆ ಹೋಗುವಂತೆ ಬೆಳಗಾವಿಯಲ್ಲಿ ವಿಧಾನಸಭೆಯ ವಿಶೇಷ ಅಧಿವೇಶನ ನಡೆಯುವುದಿದೆ. ಆ ನೆನಪಿನ ಹಂಗಿಗಾದರೂ ನಾಡಿನ ಶಾಸಕರು ಪ್ರವಾಹದ ಸಂದರ್ಭದಲ್ಲಿ ಅತ್ತ ಸುಳಿಯಬೇಕಿತ್ತು. ಪ್ರಜೆಗಳ ಸಂಕಷ್ಟಗಳಿಗೆ ಸ್ಪಂದಿಸಬೇಕಾದ ನೈತಿಕತೆ ಅಥವಾ ಸಾರ್ವಜನಿಕ ಜವಾಬ್ದಾರಿಗಳೆಲ್ಲ ದೊಡ್ಡ ಮಾತುಗಳಾದವು – ಕನಿಷ್ಠ ಮಾನವೀಯ ಸ್ಪಂದನವನ್ನೂ ನಮ್ಮ ರಾಜಕಾರಣಿಗಳು ಉಳಿಸಿಕೊಂಡಿಲ್ಲ. ಕುಡಿಯುವ ನೀರಿಗಾಗಿ ಅಪ್ರಾಯೋಗಿಕ ಯೋಜನೆಗಳ ಬಗ್ಗೆ ದೊಡ್ಡ ದೊಡ್ಡ ಮಾತುಗಳನ್ನಾಡುವ ರಾಜಕಾರಣಿಗಳು ಪ್ರವಾಹ ಸಂದರ್ಭದಲ್ಲಿ ಅನಾರೋಗ್ಯವನ್ನೂ ಮರೆವೆಯನ್ನೂ ಮೈಮೇಲೆ ಎಳೆದುಕೊಳ್ಳುತ್ತಾರೆ. ನೆರೆ ಬಂದಾಗ ಗಂಜಿಕೇಂದ್ರಗಳನ್ನು ಸ್ಥಾಪಿಸುವುದು ಹಾಗೂ ಪಾಯಕ್ಕೆ ಸಿಕ್ಕಿದ ಜನರ ರಕ್ಷಣೆಯ ಹೊರತಾಗಿ ಬೇರೆ ಯೋಚನೆಗಳು ಅವರಿಗೆ ಹೊಳೆಯುವುದಿಲ್ಲ.

ಏರಿದ ನೆರೆ ಇಳಿಯುವುದು ಸಹಜ. ಆದರೆ, ನೆರೆಯ ಪರಿಣಾಮ ದೀರ್ಘ ಕಾಲದವರೆಗೆ ಉಳಿದುಬಿಡುತ್ತದೆ. ಕುಸಿದ ಮನೆಗಳ ನಿರ್ಮಾಣ, ಚಹರೆಗಳನ್ನು ಕಳೆದುಕೊಂಡ ರಸ್ತೆಗಳನ್ನು ಪುನರ್ ರೂಪಿಸುವುದು, ಹೊಲಗದ್ದೆಗಳನ್ನು ಹದಕ್ಕೆ ತರುವುದು ಸುಲಭದ ಸಂಗತಿಯಲ್ಲ. ನೀರ ಏರಿಳಿತದಿಂದಾಗಿ ಸಾಂಕ್ರಾಮಿಕ ರೋಗಗಳು ತಲೆದೋರುವ ಸಾಧ್ಯತೆಯೂ ಇರುತ್ತದೆ. ಅಂದರೆ, ಸಮಾಜ–ಸರ್ಕಾರದ ಮುಂದೆ ನಿಜವಾದ ಸವಾಲಿರುವುದು ನೆರೆ ಇಳಿದ ನಂತರವೇ. ಪ್ರವಾಹಾನಂತರದ ಸಾಲು ಸಾಲು ಸವಾಲುಗಳನ್ನು ಎದುರಿಸಲಿಕ್ಕೆ ಸರ್ಕಾರ ಈಗಿನಿಂದಲೇ ಸಿದ್ಧತೆ ನಡೆಸಬೇಕು. ಅಧಿಕಾರದೊಂದಿಗಿನ ಹೊಸ ಪ್ರಣಯದ ಅಮಲಿನಿಂದ ಸರ್ಕಾರ ಬೇಗನೆ ಹೊರಬಂದು ವಾಸ್ತವದ ಜವಾಬ್ದಾರಿಗಳಿಗೆ ಹೆಗಲು ಕೊಡಬೇಕು.

■ ರಘುನಾಥ ಚ.ಹ.

ಸರ್ಕಾರ ರಚಿಸಲಿಕ್ಕೆ ತೋರುವ ಆತುರ ಜನರ ತೊಂದರೆಗೆ ಸ್ಪಂದಿಸುವಲ್ಲಿ ವ್ಯಕ್ತವಾಗುವುದಿಲ್ಲ ಎನ್ನುವುದು ಅಧಿಕಾರಕೇಂದ್ರದ ಆದ್ಯತೆಯೇನು ಎನ್ನುವುದನ್ನು ಸೂಚಿಸುವಂತಿದೆ. ಆಡಳಿತಾರೂಢ ಪಕ್ಷವಷ್ಟೇ ಅಲ್ಲ, ವಿರೋಧಪಕ್ಷಗಳು ಕೂಡ ಸಂಕಷ್ಟಕ್ಕೆ ಸಿಲುಕಿದ ಜನರ ಬಳಿಗೆ ಹೋಗುವ ತೊಂದರೆ ತೆಗೆದುಕೊಳ್ಳಲಿಲ್ಲ.



ಈಶ್ವರ